ಈ) ಕೇಂದ್ರ ಸರ್ಕಾರದ ಸಹಾಯಧನ ನೀಡಿಕೆ ನಿಬಂಧನೆಗಳನ್ವಯ ಸಂಬಂಧಪಟ್ಟ ಅಲೋಪತಿ ಆಸ್ಪತ್ರೆಗಳೇ ತಮ್ಮ ಸಂಸ್ಥೆಗಳಲ್ಲಿ ಪಂಚಕರ್ಮ ವಿಭಾಗ ಪ್ರಾರಂಭಿಸಲು ಅನುದಾನ ಪಡೆಯಲು ಪ್ರಸ್ತಾವನೆ ಸಲ್ಲಿಸಬೇಕಾಗಿದೆ ಕೇಂದ್ರ ಸರ್ಕಾರವು ಆನಂತರ ನೇರವಾಗಿ ಆ ಸಂಸ್ಥೆಗೆ ಅನುದಾನ ಬಿಡುಗಡೆ ಮಾಡುತ್ತದೆ ಇಲ್ಲಿಯವರೆಗೆ ಈ ಆಸ್ಪತ್ರೆಯಿಂದ ಇಂತಹ ಬೇಡಿಕೆ ಇಲಾಖೆಗೆ ಬಂದಿರುವುದಿಲ್ಲ

ಬೀದರ್‌ನಲ್ಲಿ ಪಶು ವಿಜ್ಞಾನ ವಿಶ್ವವಿದ್ಯಾನಿಲಯದ ಸ್ಥಾಪನೆ

237 (83) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್‌ನಲ್ಲಿ ಪಶು ವಿಜ್ಞಾನ ವಿಶ್ವವಿದ್ಯಾನಿಲಯ ಕಾರ್ಯಾರಂಭ ಮಾಡಿದೆಯೇ

ಅ) ಇಲ್ಲದಿದ್ದಲ್ಲಿ ಕಾರಣಗಳೇನು

ಇ) ಇದು ಯಾವಾಗ ಕಾರ್ಯಾರಂಭ ಮಾಡುವುದು

ಈ) ಈ ವಿಶ್ವವಿದ್ಯಾನಿಲಯಕ್ಕಾಗಿ ಕೇಂದ್ರ ಸರ್ಕಾರದಿಂದ ಹಣಕಾಸಿನ ನೆರವನ್ನು ಕೋರಲಾಗಿದೆಯೇ?

ಶ್ರೀ ಎಂ ಮಹಾದೇವ್ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಇಲ್ಲ

ಆ) ಸಿದ್ದಾತಾ ಪ್ರಕ್ರಿಯೆ ಪ್ರಗತಿಯಲ್ಲಿದೆ

ಇ) ಪಶುವೈದ್ಯಕೀಯ ವಿಶ್ವವಿದ್ಯಾನಿಲಯ ಸ್ಥಾಪನೆಗಾಗಿ ವಿಶ್ವವಿದ್ಯಾನಿಲಯದ ಕರಡು ವಿಧೇಯಕವನ್ನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ಪರಿಶೀಲನಾ ಸಮಿತಿಯ ಮುಂದೆ ಮಂಡಿಸಲಾಗುತ್ತಿದೆ

ಈ) ಇಲ್ಲ

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ

238 (84) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) ಮಾನ್ಯ ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಇತ್ತೀಚಿನ ಪ್ರಗತಿಯ ಕುರಿತು ಪೂರ್ಣ ವಿವರಗಳನ್ನು ನೀಡುವುದು

ಆ) ಈ ಯೋಜನೆ ಯಾವಾಗ ಪ್ರಾರಂಭವಾಗುವುದು,

ಇ) ಇದಕ್ಕಾಗಿ ರಾಜ್ಯ ಸರ್ಕಾರ ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ಸಚಿವರು)

ಅ) ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮವು, ಇತ್ತೀಚಿನ ಸಂಚಾರ ಅಧ್ಯಯನ, ವಿವರವಾದ ಸಮಗ್ರ ಯೋಜನೆ, ತಾಂತ್ರಿಕ ಮಾದರಿ ಇತ್ಯಾದಿಗಳೊಂದಿಗೆ ಯೋಜನೆಯನ್ನು ಪೂರ್ಣವಾಗಿ ಅಭಿವೃದ್ಧಿಗೊಳಿಸಿದೆ ಇಂಜಿನಿಯರಿಂಗ್, ಸಂಗ್ರಹಣಾ ಮತ್ತು ನಿರ್ಮಾಣ ಬಿಡ್‌ಗಳನ್ನು ಅಂತಿಮಗೊಳಿಸಲಾಗಿದೆ